

# ತಿನ್ನಲಿಕ್ಕಲ್ಲ, ಅಲಂಕಾರಕ್ಕೆ ಲಾಲಿಪಾಪ್

**ಹೊಂಬಣ್ಣದ ಹೂವಿನ ಮಧ್ಯೆ ಇಣುಕುವ ಬಿಳಿ ಎಸಳುಗಳು, ಕಡುಹಸುರು ಎಲೆಗಳ ನಡುವೆ ಲಾಲಿಪಾಪ್‌ನದ್ದೇ ಆಕಾರದ ಹೂವುಗಳು.. ವಾವ್‌... ಎಷ್ಟು ಮನಮೋಹಕ!**

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಸ್ವಾತಂತ್ರೋತ್ಸವ ಸಂದರ್ಭದಲ್ಲಿ ಪ್ರತಿವರ್ಷ ಫಲಪುಷ್ಪ ಪ್ರದರ್ಶನ ಏರ್ಪಡಿಸುತ್ತಾರೆ. ದೇಶ ವಿದೇಶಗಳ ವಿವಿಧ ವರ್ಣಮಯ ಹೂವುಗಳನ್ನು ವಿವಿಧ ಆಕಾರ, ವಿನ್ಯಾಸಗಳಲ್ಲಿ ಒಪ್ಪ ಓರಣವಾಗಿ ಜೋಡಿಸಿಟ್ಟಿರುವುದನ್ನು ನೋಡುವುದೇ ಕಣ್ಣಿಗೆ ಹಬ್ಬ. ಹಾಗೆ ನೋಡುವಾಗ ತಿಳಿಗುಲಾಬಿ ಬಣ್ಣದ ಹೂವುಗಳ ನಡುವೆ ವೃತ್ತಾಕಾರವಾಗಿ ವಿನ್ಯಾಸಗೊಳಿಸಿದ ಲಾಲಿಪಾಪ್‌ನದ್ದೇ ಆಕಾರದ, ಹೊನ್ನಿನ ಬಣ್ಣದ ಮಧ್ಯೆ ಮಧ್ಯೆ ಬಿಳಿ ಎಸಳುಗಳ ಹೂವುಗಳು ಥಟ್ಟನೆ ಗಮನಸೆಳೆದವು. ಬಣ್ಣ ಬಣ್ಣದ ಗುಲಾಬಿ, ಚೆಂಡು ಹೂವು, ಜರ್ಬೆರಾ, ಗ್ಲ್ಯಾಡಿಯೋಲಸ್, ಆರ್ಕಿಡ್‌ಗಳು, ಸುಗಂಧರಾಜ, ಸೇವಂತಿಗೆ ಹೂವುಗಳ ವಿವಿಧ ವಿನ್ಯಾಸದ ಜೋಡಣೆ ಕಣ್ಮನ ಸೆಳೆಯುವಂತಿದ್ದರೂ ಚೆನ್ನದ ಹೊಳಪಿನ ಲಾಲಿಪಾಪ್ ಹೂವು ಮಾತ್ರ ಹೆಚ್ಚು ಮನಮೋಹಕವಾಗಿದೆ ಎನಿಸಿತು.

ಈ ಹೂವಿನ ಜಾಡು ಹಿಡಿದು ಹೋದಾಗ ಇದರ ವೈಜ್ಞಾನಿಕ ಹೆಸರು ಪ್ಯಾಚೆಸ್ಟಾಕಿಸ್ ಲುಟಿಯಾ (**Pachystachys lutea**) ಆಗಿದ್ದು, ಇದು ಅಕಾಂಥೇಸಿ (**Acanthaceae**) ಸಸ್ಯ ಕುಟುಂಬಕ್ಕೆ ಸೇರಿದೆ ಎಂಬುದು ತಿಳಿಯಿತು. ಇದನ್ನು 'ಗೋಲ್ಡನ್ ಸೀಗಡಿ ಸಸ್ಯ' ಎಂದೂ ಕರೆಯಲಾಗುವುದು. ಇದು ಉಷ್ಣವಲಯದ ನಿತ್ಯಹರಿದ್ವರ್ಣ ಪೊದೆ ಸಸ್ಯವಾಗಿದ್ದು, ವರ್ಷಪೂರ್ತಿ ಅರಳುವುದಾದರೂ ಮಳೆಗಾಲದಲ್ಲಿಯೇ ಹೆಚ್ಚಾಗಿ ಹೂವು ಬಿಡುತ್ತದೆ.



ಗಾಢ ಹಸುರು ಎಲೆಗಳ ಮಧ್ಯೆ ಅರಳುವ ಈ ಹೂವುಗಳು ಆಲಂಕಾರಿಕವೂ ಹೌದು. ಕೈತೋಟದಲ್ಲಿಯೂ ಬೆಳೆಯಬಹುದು. ಗಿಡವು 3–4 ಅಡಿ ಎತ್ತರ ಬೆಳೆಯುತ್ತದೆ.

ಈ ಸಸ್ಯದ ಮೂಲ ಮಧ್ಯ ಮತ್ತು ದಕ್ಷಿಣ ಅಮೆರಿಕ. ಒಳಾಂಗಣ ಸಸ್ಯವಾಗಿಯೂ ಬೆಳೆಯಬಹುದು. ಬೇಸಿಗೆಯಲ್ಲಿ ಈ ಸಸ್ಯದ ಕಾಂಡವನ್ನು ಕತ್ತರಿಸಿ ಮಣ್ಣಿನಲ್ಲಿ ನೆಡುವ ಮೂಲಕ ಸಸ್ಯವೃದ್ಧಿ ಮಾಡಬಹುದು. ಇದರ ಕಾಂಡ ಮೃದು. ಲಾಲಿಪಾಪ್ ಗಿಡ ಬೇಗನೆ ಪೊದೆ ಸಸ್ಯವಾಗಿ ಬೆಳೆಯುವುದರಿಂದ ಹೆಚ್ಚು ನೀರು, ಆರೈಕೆಯ ಅವಶ್ಯಕತೆ ಇಲ್ಲ. ಆದರೆ ಮಣ್ಣಿನಲ್ಲಿ ತೇವಾಂಶ ಇದ್ದರೆ ಅನುಕೂಲ. ಇದೀಗ ನಗರ ಪ್ರದೇಶಗಳಲ್ಲಿಯೂ ಮನೆಗಳಲ್ಲಿ ಈ ಹೂವಿನ ಗಿಡ ಬೆಳೆಸುವುದನ್ನು ಕಾಣಬಹುದು.

ನರ್ಸರಿ, ಉದ್ಯಾನ ಕೇಂದ್ರಗಳು ಮತ್ತು ಆನ್‌ಲೈನ್ ಸಸ್ಯಮಳಿಗೆಗಳಲ್ಲಿ ಇದರ ಗಿಡ ಸಿಗುತ್ತದೆ.

■ ಯು.ಎ.